KACD310004592023

Presented on : 15.04.2023
Registered on : 18.04.2023
Decided on : 06.04.2026
Duration : 02 y/11 m/22days

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಹಿರಿಯೂರು.

ಉಪಸ್ಥಿತರು:– ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಹಿರಿಯೂರು.

**ಸಿ ಸಿ. ನಂಬರ್ 102/2023**

**ದಿನಾಂಕಃ 6 ನೇ ಏಪ್ರಿಲ್ 2026.**

ಪಿರ್ಯಾದಿ ಃ ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ
ಆರಕ್ಷಕರು, ಹಿರಿಯೂರು
(ಪರವಾಗಿ ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ –

ಆರೋಪಿತರು ಃ

1. **ರವಿ ಯಾನೆ ರವಿಚಂದ್ರ** ತಂದೆ ಕಾಟಪ್ಪ, 32 ವರ್ಷ
2. **ರಮೇಶ** ತಂದೆ ಕಾಟಪ್ಪ, 30 ವರ್ಷ
3. **ವಿಶ್ವ ಯಾನೆ ವಿಶ್ವನಾಥ** ತಂದೆ ನಿಂಗಪ್ಪ, 32 ವರ್ಷ
4. **ಶ್ರೀಮತಿ ಶಾಂತಮ್ಮ** ಕೋಂ ಕಾಟಪ್ಪ, 48 ವರ್ಷ

ಎಲ್ಲರ ವಾಸಃ ಕ್ಯಾತದೇವರಹಟ್ಟಿ ಗ್ರಾಮ,
ಹಿರಿಯೂರು ತಾಲೂಕು.

(1 ರಿಂದ 4 ನೇ ಆರೋಪಿತರ ಪರವಾಗಿಃ ಶ್ರೀ ಪಿ.ಟಿ ವಕೀಲರು)

SUJATHA SUVARNA B
Digitally signed by SUJATHA SUVARNA B
Date: 2026.04.07 17:53:22 +0530

| | | |
|---|---|---|
| ಆರೋಪಿಸಲ್ಪಟ್ಟ ಅಪಾದನೆ | ಃ | ಭಾ.ದ.ಸಂ ಕಲಂ 323, 324, 504,506 ಸಹವಾಚಕ 34 |
| ಆರೋಪದ ದಿನಾಂಕ | ಃ | 04.11.2022 |
| ಆರೋಪ ದಾಖಲಾದ ದಿನಾಂಕ | ಃ | 04.11.2022 |
| ಸಾಕ್ಷ್ಯ ಪ್ರಾರಂಭದ ದಿನಾಂಕ | ಃ | 01.04.2026 |
| ಸಾಕ್ಷ್ಯ ಮುಕ್ತಾಯ ಗೊಂಡ ದಿನಾಂಕ | ಃ | 01.04.2026 |
| ತೀರ್ಪು ಘೋಷಿಸಿದ ದಿನಾಂಕ | ಃ | 06.04.2026 |
| ನ್ಯಾಯಾಧೀಶರ ನಿರ್ಣಯ | ಃ | ಅಂತಿಮ ಆದೇಶ |

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

## ತೀರ್ಪು

ಹಿರಿಯೂರು ಗ್ರಾಮಾಂತರ ಪೋಲೀಸ್ ಠಾಣೆ ಆರಕ್ಷಕ ಉಪನಿರೀಕ್ಷರು 1 ರಿಂದ 4 ನೇ ಆರೋಪಿತರ ವಿರುದ್ದ ಭಾ.ದ.ಸಂ ಕಲಂ 323, 324, 504, 506 ಸಹವಾಚಕ 34 ರಡಿಯಲ್ಲಿ ದಂಡಿಸಬಹುದಾದ ಕೃತ್ಯಗಳನ್ನು ಎಸಗಿರುತ್ತಾರೆಂದು ಆರೋಪಿಸಿ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪರ ಪ್ರಕರಣದ ಸಂಕ್ಷಿಪ್ತ ವಿವರಣೆ ಈ ಕಳಕಂಡಂತಿರುತ್ತವೆ.

ದಿನಾಂಕ 04.11.2022 ರಂದು 1 ನೇ ಆರೋಪಿಯು ನುಗ್ಗೆ ಮರವನ್ನು ಕಡಿದು ಕೊನೆಗಳನ್ನು ಚಾಸಾ.1 ರವರ ಮನೆಯ ಮುಂಭಾಗದಲ್ಲಿರುವ ದನದ ಕೊಟ್ಟಿಗೆಯ ಹತ್ತಿರ ಹಾಕಿದ್ದು ಶಾದರೆಯಾಗಿ ಹುಳ ಬರುತ್ತವೆ ಎಂದು ಚಾಸಾ.4 ರವರು ನುಗ್ಗೆ ಮರದ ಕೊನೆಗಳನ್ನು ತೆಗೆದು 1 ನೇ ಆರೋಪಿಯ ಮನೆಯ ಪಕ್ಕಕ್ಕೆ ಹಾಕಿದ್ದಕ್ಕೆ 1 ನೇ ಆರೋಪಿಯು

ದುರುದ್ದೇಶಗೊಂಡು ಅದೇ ದಿನ ಮಧ್ಯಾಹ್ನ 2.30 ರ ಸಮಯದಲ್ಲಿ ಚಾಸಾ.4 ರವರ ಮನೆಯ ಬಳಿ ಬಂದು ಅವರಿಗೆ ಸೂಳೆ ಮಗನೆ ನಮ್ಮ ಜಾಗದಲ್ಲಿ ಹಾಕಿದ್ದ ನುಗ್ಗೆ ಮರವನ್ನು ಯಾಕೆ ತೆಗೆದುಹಾಕಿದೆ ಎಂದಿದ್ದು ಮತ್ತು ಚಾಸಾ.5 ರವರಿಗೆ 1 ಮತ್ತು 4 ನೇ ಆರೋಪಿತರು ಸೂಳೆ ಮಗನೆ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು 1 ನೇ ಆರೋಪಿಯು ಚಾಸಾ.4 ರವರಿಗೆ ಕೋಲಿನಿಂದ ಪಕ್ಕೆಗೆ ಹೊಡೆದಿದ್ದು, ಹಾಗೂ ಚಾಸಾ.5 ರವರಿಗೆ ಕೋಲಿನಿಂದ ಸೊಂಟಕ್ಕೆ ಹೊಡೆದಿದ್ದು, 4 ನೇ ಆರೋಪಿಯು ಕಲ್ಲಿನಿಂದ ಮೊಣಕಾಲಿಗೆ ಹೊಡೆದಿದ್ದು ಮತ್ತು 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ.1 ರವರ ಎಡಹಣೆಗೆ ಎಡಕಣ್ಣಿನ ಕೆಳಭಾಗಕ್ಕೆ ಹೊಡೆದು ನೋವುಂಟುಪಡಿಸಿದ್ದು 1 ನೇ ಆರೋಪಿಯ ಪರವಾಗಿ 2 ರಿಂದ 4 ನೇ ಆರೋಪಿತರು ಬಂದು ಚಾಸಾ.4 ರವರ ಮೈಕೈಗೆ ಹೊಡೆದಿದ್ದು, 1 ನೇ ಆರೋಪಿಯು ಚಾಸಾ.1 ರವರಿಗೆ ಕಾಲಿನಿಂದ ಹೊಟ್ಟೆಗೆ ಹೊಡೆದಿದ್ದು ಮತ್ತು ಎಲ್ಲಾ ಆರೋಪಿತರು ಚಾಸಾ.1, 4 ಮತ್ತು 5 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿದ್ದು ಮತ್ತು ಆರೋಪಿತರು ಚಾಸಾ.1, 4 ಮತ್ತು 5 ರವರನ್ನು ಕುರಿತು ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಪಿರ್ಯಾದಿದಾರರು ದೂರು ನೀಡಿದ್ದು ಸದರಿ ದೂರಿನ ಮೇರೆಗೆ ತನಿಖಾಧಿಕಾರಿಗಳು ತನಿಖೆ ಮಾಡಿ ಆರೋಪಿಗಳು ಭಾರತೀಯ ದಂಡ ಸಂಹಿತೆಯ ಕಲಂ.323, 324, 504, 506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಾರೆಂದು ದೋಷಾರೋಪಣಾಪಟ್ಟಿ ಸಲ್ಲಿಸಲಾಗಿರುತ್ತದೆ.

3. ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ ನಂತರ ನ್ಯಾಯಾಲಯವು ಆರೋಪಿತರ ವಿರುದ್ಧ ಮೇಲ್ಕಂಡ ಕಲಂಗಳನ್ವಯ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೆಯನ್ನು

ತೆಗೆದುಕೊಂಡು 1 ರಿಂದ 4 ನೇ ಆರೋಪಿತರ ವಿರುದ್ಧ ಸಮನ್ಸ್ ಜಾರಿ ಮಾಡಿದಾಗ ಮೇಲ್ಕಂಡ ಆರೋಪಿತರ ಹಾಜರಾತಿಯನ್ನು ಪಡೆದು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. ನಂತರ ಆರೋಪಿಗಳಿಗೆ ದೋಷಾರೋಪಣ ಪಟ್ಟಿ ಹಾಗೂ ಅದರ ಲಗತ್ತಿಸಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ನೀಡಲಾಗಿದೆ. ಆರೋಪಿತರ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣೆಯನ್ನು ರಚಿಸಿ ಆರೋಪಿಗಳಿಗೆ ಓದಿ ಹೇಳಲಾಗಿ ಆರೋಪಿಗಳು ತಪ್ಪನ್ನು ಒಪ್ಪಿಕೊಳ್ಳದೇ ವಿಚಾರಣೆಯಾಗಬೇಕೆಂದು ಕೇಳಿಕೊಂಡರು.

4. ಅಭಿಯೋಜನಾ ಪಕ್ಷದವರು ತಮ್ಮ ಈ ಪ್ರಕರಣದ ಸಮರ್ಥನೆಗಾಗಿ ಚಾಸಾ-1 ರಿಂದ ಚಾಸಾ.11 ರ ಪೈಕಿ ಚಾಸಾ.1, 4 ಮತ್ತು 5 ನ್ನು ಪ್ರಾಸಾ.1 ರಿಂದ 3 ಎಂದು ವಿಚಾರಣೆ ಮಾಡಿಕೊಂಡಿರುತ್ತಾರೆ ಹಾಗೂ ನಿಪಿ.1 ರಿಂದ 4 ರ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಅಭಿಯೋಜನೆಯವರ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿಯ ವಿರುದ್ಧ ಯಾವುದೇ ರೀತಿಯ ದಂಡನಾರ್ಹವಾದ ಸಾಕ್ಷ್ಯ ಒದಗಿಸದೇ ಇರುವುದರಿಂದ ದಂ.ಪ್ರ.ಸಂ. ಕಲಂ 313 ಅಡಿಯಲ್ಲಿ ಮಾಡಬೇಕಾಗಿದ್ದ ಆರೋಪಿಯ ಹೇಳಿಕೆಯನ್ನು ಕೈಬಿಡಲಾಗಿದೆ. ಆರೋಪಿಯ ಪರ ಯಾವುದೇ ಸಾಕ್ಷಿಯನ್ನು ವಿಚಾರಣೆ ಮಾಡಿಕೊಂಡಿರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

5. ಉಭಯ ಪಕ್ಷಕಾರರ ಪರ ಮಂಡಿಸಿದ ವಾದ ವಿವಾದಗಳನ್ನು ಅಲಿಸಲಾಗಿದೆ ಹಾಗೂ ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಗಿದೆ.

6. ಈ ಹಿನ್ನಲೆಯಲ್ಲಿ ನ್ಯಾಯಾಲಯದ ಪರಿಗಣನೆಗೆ ಉದ್ಭವಿಸುವ ಅಂಶಗಳೇನೆಂದರೆ

1. ಅಭಿಯೋಜನೆಯು ದಿನಾಂಕ **04.11.2022** ರಂದು **1** ನೇ ಆರೋಪಿಯು ನುಗ್ಗೆ ಮರವನ್ನು ಕಡಿದು ಕೊನೆಗಳನ್ನು ಚಾಸಾ.**1** ರವರ ಮನೆಯ ಮುಂಭಾಗದಲ್ಲಿರುವ ದನದ ಕೊಟ್ಟಿಗೆಯ ಹತ್ತಿರ ಹಾಕಿದ್ದು

ಶಾದರೆಯಾಗಿ ಹುಳ ಬರುತ್ತವೆ ಎಂದು ಚಾಸಾ.4 ರವರು ನುಗ್ಗೆ ಮರದ ಕೊನೆಗಳನ್ನು ತೆಗೆದು 1 ನೇ ಆರೋಪಿಯ ಮನೆಯ ಪಕ್ಕಕ್ಕೆ ಹಾಕಿದ್ದಕ್ಕೆ 1 ನೇ ಆರೋಪಿಯು ಅದೇ ದಿನ ಮಧ್ಯಾಹ್ನ 2.30 ರ ಸಮಯದಲ್ಲಿ ಚಾಸಾ.4 ರವರ ಮನೆಯ ಬಳಿ ಬಂದು ಅವರಿಗೆ ಸೂಳೆ ಮಗನೆ ನಮ್ಮ ಜಾಗದಲ್ಲಿ ಹಾಕಿದ್ದ ನುಗ್ಗೆ ಮರವನ್ನು ಯಾಕೆ ತೆಗೆದುಹಾಕಿದೆ ಎಂದಿದ್ದು ಮತ್ತು ಚಾಸಾ.5 ರವರಿಗೆ 1 ಮತ್ತು 4 ನೇ ಆರೋಪಿತರು ಸೂಳೆ ಮಗನೆ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು ಆದ್ದರಿಂದ ಭಾ ದಂ ಸಂ ಕಲಂ.504 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

2. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದು 1 ನೇ ಆರೋಪಿಯು ಚಾಸಾ.4 ರವರಿಗೆ ಕೋಲಿನಿಂದ ಪಕ್ಕೆಗೆ ಹೊಡೆದಿದ್ದು, ಹಾಗೂ ಚಾಸಾ.5 ರವರಿಗೆ ಕೋಲಿನಿಂದ ಸೊಂಟಕ್ಕೆ ಹೊಡೆದಿದ್ದು, 4 ನೇ ಆರೋಪಿಯು ಕಲ್ಲಿನಿಂದ ಮೊಣಕಾಲಿಗೆ ಹೊಡೆದಿದ್ದು ಮತ್ತು 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ.1 ರವರ ಎಡಹಣೆಗೆ ಎಡಕಣ್ಣಿನ ಕೆಳಭಾಗಕ್ಕೆ ಹೊಡೆದು ನೋವುಂಟುಪಡಿಸಿದ್ದು ಆದ್ದರಿಂದ ಭಾ ದಂ ಸಂ ಕಲಂ.324 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

3. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದು 1 ನೇ ಆರೋಪಿಯ ಪರವಾಗಿ 2 ರಿಂದ 4 ನೇ ಆರೋಪಿತರು ಬಂದು ಚಾಸಾ.4 ರವರ ಮೈಕೈಗೆ ಹೊಡೆದಿದ್ದು, 1 ನೇ ಆರೋಪಿಯು ಚಾಸಾ.1 ರವರಿಗೆ ಕಾಲಿನಿಂದ ಹೊಟ್ಟೆಗೆ ಹೊಡೆದಿದ್ದು ಮತ್ತು ಎಲ್ಲಾ ಆರೋಪಿತರು ಚಾಸಾ.1, 4 ಮತ್ತು 5 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟುಪಡಿಸಿದ್ದು ಆದ್ದರಿಂದ ಭಾ ದಂ ಸಂ ಕಲಂ.323 ಸಹವಾಚಕ 34 ರಡಿಯಲ್ಲಿ

ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

4. ಅಭಿಯೋಜನೆಯು ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ಅಪರಾಧವೆಸಗುವ ಸಮಾನೋದ್ದೇಶದಿಂದ ಬಂದು ಚಾಸಾ.1, 4 ಮತ್ತು 5 ರವರನ್ನು ಕುರಿತು ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದು, ಆದ್ದರಿಂದ ಭಾ ದಂ ಸಂ ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆಂದು ಸಂಶಯಾತೀತವಾಗಿ ರುಜುವಾತು ಪಡಿಸುತ್ತಾರೆಯೇ?

5. ಆದೇಶ ಏನು ?

**7.** ಮೇಲಿನ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸಿದ್ದೇನೆಃ–

**ಅಂಶ ನಂ.1 ರಿಂದ 4ಃ** ನಕಾರಾತ್ಮಕವಾಗಿ

**ಅಂಶ ನಂ.5 ಃ** ಅಂತಿಮ ಆದೇಶದಂತೆ ಈ ಕೆಳಗೆ ಕಾಣಿಸಿರುವ

**ಕಾರಣಗಳುಃಃ**

**ಅಂಶ ನಂ.1 ರಿಂದ 4ಃ** ಸದರಿ ಅಂಶಗಳು ಒಂದಕ್ಕೊಂದು ಪೂರಕವಾಗಿರುವುದರಿಂದ ವಿಷಯದ ಪುನರಾವರ್ತನೆಯನ್ನು ತಡೆಗಟ್ಟುವ ಉದ್ದೇಶದಿಂದ ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಂಡಿದೆ.

**8.** ಈ ಪ್ರಕರಣದಲ್ಲಿ ಅಭಿಯೋಜನೆಯು ರುಜುವಾತುಪಡಿಸಬೇಕಾಗಿರುವ ಅಂಶಗಳೆಂದರೆ, ದಿನಾಂಕ 04.11.2022 ರಂದು 1ನೇ ಆರೋಪಿಯು ನುಗ್ಗೆ ಮರವನ್ನು ಕಡಿದು ಕೊನೆಗಳನ್ನು ಚಾಸಾ.1 ರವರ ಮನೆಯ ಮುಂಭಾಗದಲ್ಲಿರುವ ದನದ ಕೊಟ್ಟಿಗೆಯ ಹತ್ತಿರ ಹಾಕಿದ್ದು ಶಾದರೆಯಾಗಿ ಹುಳ ಬರುತ್ತವೆ ಎಂದು ಚಾಸಾ.4 ರವರು ನುಗ್ಗೆ ಮರದ

ಕೊನೆಗಳನ್ನು ತೆಗೆದು 1 ನೇ ಆರೋಪಿಯ ಮನೆಯ ಪಕ್ಕಕ್ಕೆ ಹಾಕಿದ್ದಕ್ಕೆ 1 ನೇ ಆರೋಪಿಯು ದುರುದ್ದೇಶಗೊಂಡು ಅದೇ ದಿನ ಮಧ್ಯಾಹ್ನ 2.30 ರ ಸಮಯದಲ್ಲಿ ಚಾಸಾ.4 ರವರ ಮನೆಯ ಬಳಿ ಬಂದು ಅವರಿಗೆ ಸೂಳೆ ಮಗನೆ ನಮ್ಮ ಜಾಗದಲ್ಲಿ ಹಾಕಿದ್ದ ನುಗ್ಗೆ ಮರವನ್ನು ಯಾಕೆ ತೆಗೆದುಹಾಕಿದೆ ಎಂದಿದ್ದು ಮತ್ತು ಚಾಸಾ.5 ರವರಿಗೆ 1 ಮತ್ತು 4 ನೇ ಆರೋಪಿತರು ಸೂಳೆ ಮಗನೆ ಬೋಳಿ ಮಗನೆ ಎಂದು ಅವಾಚ್ಯ ಶಬ್ದಗಳಿಂದ ಬೈದಾಡಿದ್ದು 1 ನೇ ಆರೋಪಿಯು ಚಾಸಾ.4 ರವರಿಗೆ ಕೋಲಿನಿಂದ ಪಕ್ಕೆಗೆ ಹೊಡೆದಿದ್ದು, ಹಾಗೂ ಚಾಸಾ.5 ರವರಿಗೆ ಕೋಲಿನಿಂದ ಸೊಂಟಕ್ಕೆ ಹೊಡೆದಿದ್ದು, 4 ನೇ ಆರೋಪಿಯು ಕಲ್ಲಿನಿಂದ ಮೊಣಕಾಲಿಗೆ ಹೊಡೆದಿದ್ದು ಮತ್ತು 1 ನೇ ಆರೋಪಿಯು ಕುಡುಗೋಲಿನಿಂದ ಚಾಸಾ.1 ರವರ ಎಡಹಣೆಗೆ ಎಡಕಣ್ಣಿನ ಕೆಳಭಾಗಕ್ಕೆ ಹೊಡೆದು ನೋವುಂಟುಪಡಿಸಿದ್ದು 1 ನೇ ಆರೋಪಿಯ ಪರವಾಗಿ 2 ರಿಂದ 4 ನೇ ಆರೋಪಿತರು ಬಂದು ಚಾಸಾ.4 ರವರ ಮೈಕೈಗೆ ಹೊಡೆದಿದ್ದು, 1 ನೇ ಆರೋಪಿಯು ಚಾಸಾ.1 ರವರಿಗೆ ಕಾಲಿನಿಂದ ಹೊಟ್ಟೆಗೆ ಹೊಡೆದಿದ್ದು ಮತ್ತು ಎಲ್ಲಾ ಆರೋಪಿತರು ಚಾಸಾ.1, 4 ಮತ್ತು 5 ರವರಿಗೆ ಕೈಕಾಲುಗಳಿಂದ ಮೈಕೈಗೆ ಹೊಡೆದು ನೋವುಂಟುಪಡಿಸಿದ್ದು ಮತ್ತು ಆರೋಪಿತರು ಚಾಸಾ.1, 4 ಮತ್ತು 5 ರವರನ್ನು ಕುರಿತು ನಿಮ್ಮನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿರುತ್ತಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ಪುರಾವೆಗೊಳಿಸಬೇಕಾಗಿರುತ್ತದೆ.

**9.** ಅಭಿಯೋಜನೆಯವರು ಚಾಸಾ.1 ರವರನ್ನು ಫ್ರಾಸಾ.1 ಎಂದು, ಚಾಸಾ.4 ರವರನ್ನು ಫ್ರಾಸಾ.2 ಎಂದು ಹಾಗೂ ಚಾಸಾ.5 ರವರನ್ನು ಫ್ರಾಸಾ.3 ಎಂದು ವಿಚಾರಣೆಗೊಳಪಡಿಸಿಕೊಂಡಿದ್ದು, ಚಾಸಾ.1 ರವರು ನೀಡಿದ ದೂರನ್ನು ನಿಪಿ.1 ಎಂದು, ಫ್ರಾಸಾ.2 ರವರ ಹೇಳಿಕೆಯನ್ನು ನಿಪಿ.2 ಎಂದು, ಮಹಜರನ್ನು ನಿಪಿ.3 ಎಂದು, ಫ್ರಾಸಾ.3

ರವರ ಸಹಿಯನ್ನು ನಿ.ಪಿ-3(ಎ) ಎಂದು ಹಾಗೂ ಪ್ರಾಸಾ.3 ರವರ ಹೇಳಿಕೆಯನ್ನು ನಿಪಿ.4 ಎಂದು ಗುರುತಿಸಿಕೊಂಡಿರುತ್ತಾರೆ.

**10.** ಪ್ರಾಸಾ.**1** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅವರಿಗೆ ಚಾಸಾ.**4** ಅವರ ಗಂಡ ಚಾಸಾ.**5** ಅವರ ಮಗ, ಚಾಸಾ.**6** ರಿಂದ **8** ಹಾಗೂ ಆರೋಪಿತರು ಪರಿಚಯಸ್ಥರು, ಆರೋಪಿತರು ಅವರಿಗಾಗಲೀ ಚಾಸಾ.4, 5 ರವರಿಗಾಲೀ ಜಗಳ ಮಾಡಿಲ್ಲ ಕೈ ಕಾಲುಗಳಿಂದ ಮೈ ಕೈಗೆ ಹೊಡೆದಿಲ್ಲ ಕುಡುಗೋಲಿಂದ ಹಲ್ಲೆ ಮಾಡಿಲ್ಲ ಪ್ರಾಣ ಬೆದರಿಕೆ ಹಾಕಿಲ್ಲ ಅವರು ಪೊಲೀಸರಿಗೆ ನಿಪಿ.1 ರಂತೆ ಯಾವುದೇ ಹೇಳಿಕೆ ದೂರು ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**11.** ಪ್ರಾಸಾ.**2** ಮತ್ತು **3** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರು ಪರಿಚಯಸ್ಥರು ಎಂದು ಆರೋಪಿತರು ಅವರಿಗಾಗಲೀ ಅವರ ತಾಯಿಗಾಗಲೀ ಜಗಳ ಮಾಡಿಲ್ಲ, ಕೈ ಕಾಲುಗಳಿಂದ ಮೈ ಕೈಗೆ ಹೊಡದಿಲ್ಲ ಕುಡುಗೋಲಿನಿಂದ ಹಲ್ಲೆ ಮಾಡಿಲ್ಲ ಪ್ರಾಣ ಬೆದರಿಕೆ ಹಾಕಿಲ್ಲ ಅವಾಚ್ಯ ಶಬ್ಧಗಳಿಂದ ಬೈದಿಲ್ಲ ಹಾಗೂ ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ.

**12.** ಅಭಿಯೋಜನೆಯವರು ಪ್ರಾಸಾ.1 ರಿಂದ **3** ರವರು ಅಭಿಯೋಜನೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿದ್ದಾರೆಂದು ಅವರನ್ನು ಪಾಟೀ ಸವಾಲು ಮಾಡಿದಾಗ್ಯೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಸಾಕ್ಷ್ಯ ಹೊರಹೊಮ್ಮಿರುವುದಿಲ್ಲ ಮತ್ತು ಅವರು ದೋಷಾರೋಪಣೆಯ ಎಲ್ಲಾ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

13. ಈ ಪ್ರಕರಣದಲ್ಲಿ ದೂರುದಾರ ಮತ್ತು ಗಾಯಾಳುಗಳಾದಂತಹ ಪ್ರಾಸಾ.**1** ರಿಂದ **3** ರವರು ತಮಗಾದ ಗಾಯಗಳನ್ನು ಮತ್ತು ಘಟನೆಯನ್ನು ಸಂಪೂರ್ಣವಾಗಿ

ಅಲ್ಲಗಳೆದಿರುತ್ತಾರೆ. ಆದ್ದರಿಂದ ಉಳಿದ ಅಭಿಯೋಜನೆ ಪರ ಸಾಕ್ಷಿದಾರರ ಸಾಕ್ಷ್ಯವನ್ನು ಕೈಬಿಡಲಾಗಿದೆ. ಅಭಿಯೋಜನೆಯವರು ಪ್ರಾಸಾ.1 ರಿಂದ 3 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಿದ್ಯಾಗೂ ಕೂಡ ಅಭಿಯೋಜನೆಗೆ ಪೂರಕವಾದ ಯಾವುದೇ ಅಂಶಗಳು ಪ್ರಾಸಾ.1 ರಿಂದ 3 ರವರ ಸಾಕ್ಷ್ಯದಲ್ಲಿ ಹೊರ ಬಂದಿರುವುದಿಲ್ಲ ಭಾರತೀಯ ಸಾಕ್ಷ್ಯ ಅಧಿನಿಯಮ 1872 ರ ಕಲಂ 154 ರ ಅಡಿಯಲ್ಲಿ ಪ್ರಾಸಾ.1 ರಿಂದ 3 ರವರ ಸಾಕ್ಷ್ಯವನ್ನು ವಿಶ್ಲೇಷಿಸಿದಾಗ ವಿರುದ್ಧ ಸಾಕ್ಷಿದಾರರು ಘಟನೆಗೆ ಸಂಬಂಧಿಸಿದಂತೆ ಏನನ್ನು ಹೇಳದಿರುವಾಗ ಉಳಿದ ಸಾಕ್ಷಿದಾರರ ಸಾಕ್ಷ್ಯವು ಉಪಯೋಗವಿಲ್ಲದ್ದು ಆಗಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯದ ತೀರ್ಪುಜನ್ಯ **Kathi Odhabhai Bhimabhai V/s. State of Gujarath, AIR** 1993 **S.C** 1193 ಪ್ರಕರಣದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ. ಆದ್ದರಿಂದ ಪ್ರಾಸಾ.1 ರಿಂದ 3 ರವರ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಯಾವುದೇ ರೀತಿಯಿಂದ ಉಪಯೋಗಕ್ಕೆ ಬಾರದಂತೆ ಇದೆ. ಆದ್ದರಿಂದ ಇಂತಹ ಘಟನೆ ನಡೆದಿದೆ ಎಂಬುದನ್ನು ನಂಬುವಂತಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯವರು 1 ರಿಂದ 4 ನೇ ಆರೋಪಿತರ ವಿರುದ್ಧ ಹೊರಿಸಲಾದ ಆರೋಪವನ್ನು ಸಂಶಯಾತೀತವಾಗಿ ಸಾಬೀತುಪಡಿಸಲು ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ನಿರ್ಣಯಿಸಿ ಅಂಶ 1 ರಿಂದ 4 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**14.ಅಂಶ ನಂ.5** ಮೇಲ್ಕಂಡ ಕಾರಣಗಳಿಂದಾಗಿ ಈ ಕೆಳಕಂಡಂತೆ ಆದೇಶ ಮಾಡುತ್ತೇನೆ.

**ಆದೇಶ**

1 ರಿಂದ 4 ನೇ ಆರೋಪಿತರ ಮೇಲಿನ ಆಪಾದನೆ ಸಾಬೀತಾಗಿರುವುದಿಲ್ಲ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ 1 ರಿಂದ 4 ನೇ ಆರೋಪಿತರ ವಿರುದ್ಧ ಹೊರಿಸಲಾದ ಭಾರತೀಯ ನ್ಯಾಯ ಸಂಹಿತೆಯ ಕಲಂ. ಭಾ.ದ.ಸಂ ಕಲಂ 323, 324, 504, 506 ಸಹವಾಚಕ 34 ರಡಿಯಲ್ಲಿ ಎಸಗಿದ ಅಪರಾಧಗಳಿಂದ ದೋಷ ಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಪಿ. ಎಫ್ ನಂ.162/2022 ರಲ್ಲಿ ಅಮಾನತ್ತು ಪಡಿಸಿಕೊಂಡಿರುವ ಎರಡು ಕಲ್ಲುಗಳು ಹಾಗೂ ಎರಡು ಕೋಲುಗಳು ಬೆಲೆರಹಿತ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ನಾಶಗೊಳಿಸಲು ಆದೇಶಿಸಲಾಗಿದೆ ಹಾಗೂ 1 ಅಡಿ ಉದ್ದದ ಪ್ಲಾಸ್ಟಿಕ್ ಹಿಡಿಕೆ ಇರುವ ಒಂದು ಕುಡುಗೋಲು ಬೆಲೆಯುಳ್ಳ ವಸ್ತುವಾಗಿರುವುದರಿಂದ ಮೇಲ್ಮನವಿ ಅವಧಿ ಮುಗಿದ ನಂತರ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಲಾಗಿದೆ

ಈ ಪ್ರಕರಣದಲ್ಲಿ ಆರೋಪಿ ಮತ್ತು ಅವರ ಜಾಮೀನುದಾರರು ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಅಡಿಯಲ್ಲಿ ಬರೆದುಕೊಟ್ಟಂತಹ ಜಾಮೀನು ಮುಚ್ಚಳಿಕೆಗಳು ಈ ತೀರ್ಪು ಉದ್ಘೋಷಿಸಿದ ದಿನದಿಂದ 6 ತಿಂಗಳವರೆಗೆ ಚಾಲ್ತಿಯಲ್ಲಿರುತ್ತದೆ ಹಾಗೂ ಸದರಿ ಅವಧಿಯಲ್ಲಿ ಮೇಲ್ಮನವಿ ಪ್ರಾಧಿಕಾರದಿಂದ ಯಾವುದೇ ಸೂಚನೆ ಬರದೇ ಇದ್ದ ಪಕ್ಷದಲ್ಲಿ ಸದರಿ ಜಾಮೀನು ಮುಚ್ಚಳಿಕೆಗಳು ಸ್ವಯಂಚಾಲಿತವಾಗಿ ರದ್ದಾಗತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ ದಿಃ 06.04.2026 ರಂದು ಘೋಷಿಸಲಾಯಿತು)

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

**ಅನುಬಂಧ**

**I ಪಿರ್ಯಾದುದಾರರ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

| | | |
|---|---|---|
| ಫ್ರಾಸಾ–1 | ಃ | ಕರಿಯಮ್ಮ |
| ಫ್ರಾಸಾ–2 | ಃ | ಕಾಟಪ್ಪ |
| ಫ್ರಾಸಾ–3 | ಃ | ನಿಂಗರಾಜು |

**II ಪಿರ್ಯಾದುದಾರರ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

| | | |
|---|---|---|
| ನಿ.ಪಿ–1 | ಃ | ದೂರು |
| ನಿ.ಪಿ–2 | ಃ | ಫ್ರಾಸಾ.2 ರವರ ಹೇಳಿಕೆ |
| ನಿ.ಪಿ–3 | ಃ | ಮಹಜರ್ |
| ನಿ.ಪಿ–3(ಎ) | ಃ | ಫ್ರಾಸಾ.3 ರವರ ಸಹಿ |
| ನಿ.ಪಿ–3 | ಃ | ಫ್ರಾಸಾ.3 ರವರ ಹೇಳಿಕೆ |

**III ಆರೋಪಿಯ ಪರ ವಿಚಾರಣೆ ಮಾಡಲಾದ ಸಾಕ್ಷಿಗಳುಃ–**

–ಇಲ್ಲಾ–

**IV ಆರೋಪಿಯ ಪರ ಗುರ್ತಿಸಲ್ಪಟ್ಟ ದಾಖಲಾತಿಗಳುಃ–**

–ಇಲ್ಲಾ–

**V ಅಭಿಯೋಜನೆಯ ಪರ ಮುದ್ದೆ ಮಾಲುಗಳು –**

–ಇಲ್ಲಾ–

(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಹಿರಿಯೂರು.

Visit ecourts.gov.in for updates or download mobile app “eCourts Services” from Android or iOS

SUJATHA SUVARNA B
Digitally signed by SUJATHA SUVARNA B
Date: 2026.04.07 17:53:29 +0530